Appointment of Skilled Artisans in the Transport Wing of the Directorate of Health Services.

685. SRI P. N. REDDY (Malur).—Will the Minister for Health and Family Welfare be pleased to state.—

(a) whether some of the appointments in the Transport Wing of the Directorate of Health Services especially some technical appointments such as skilled Artisans etc., have been made, disregarding the provisions of C & R Rules.

(b) whether Government/Department are aware of cases of misrepresentation of facts about qualifications (Technical) by some persons who were recruited by the Departmental Recruitment Committee, to such posts;

(c) if so, what action has been taken by Government against such erring officials;

(d) whether Government are aware that by such irregular recruitment of non-qualified persons, there is injustice done to the well-qualified persons and SCs/STs candidates:

(e) if so whether as remedial measures Government are thinking to terminate such irregular appointments and start legal proceedings against such officials, and fill up the consequential vacancies by qualified persons of SCs/STs candidates and others?

SRI M. MALLAPPA (Minister for Health and Family Welfare).—

(a) No.

(b) No.

(c) Does not arise.

(d) Does not arise.

(e) Does not arise.

ಶ್ರೀ ಪಿ. ಎನ್. ರೆಡ್ಡಿ ಸ್ವಾಮಿ ತಾವು ಉತ್ತರದಲ್ಲಿ ವಿಶೇಷವಾಗಿ ನುರಿತ ಕುಶಲಕರ್ಮಿ ಇತ್ಯಾದಿ ಕೆಲವು ತಾಂತ್ರಿಕ ಹುದ್ದೆಗಳನ್ನು ಭರ್ತಿ ಮಾಡಿಲ್ಲವೆಂದು ಹೇಳಿದ್ದೀರಿ. ಆದರೆ ನನಗೆ ತಿಳಿದ ಪ್ರಕಾರ ಅಧಿಕಾರಿಗಳು ತಪ್ಪಾಗಿ ಸರಿಯಾದ ವಿಷಯಗಳನ್ನು ತಿಳಿಸುತ್ತಿಲ್ಲವೆಂದು ಇದರಿಂದ ಗೊತ್ತಾಗುತ್ತದೆ. ಇತ್ತೀಚೆಗೆ ಇಂಥ ಯಾರನ್ನೂ ತೆಗೆದುಕೊಂಡಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೆ ?.

† ಶ್ರೀ ಎಂ. ಮಲ್ಲಪ್ಪ —ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಪಿ. ಎನ್. ರೆಡ್ಡಿ —ಸ್ವಾಮಿ ೩-೪ ವರ್ಷಗಳ ಹಿಂದೆ ಎಚ್. ಕೆ. ಮೂರ್ತಿ ಎನ್ನುವವರು ರಾಜೀನಾಮೆ ಕೊಟ್ಟಿರುತ್ತಾರೆ. ಮೊದಲನೇ ವರ್ಷದ ಡಿಪ್ಲೊಮೋ ಆಗಿರದಿದ್ದರೂ ಮೂರನೆವರ್ಷದ ಡಿಪ್ಲೊಮೋ ಸರ್ಟಿಫಿಕೇಟ್ ತೆಗೆದುಕೊಂಡು ೪-೫ ವರ್ಷಗಳಿಂದ ಕೆಲಸ ಮಾಡಿದ್ದಾರೆ. ಈ ಒಂದು ಪ್ರಶ್ನೆ ಬರುತ್ತದೆಂದು ಇತ್ತೀಚೆಗೆ ಅವರು ರಾಜೀನಾಮೆಯನ್ನು ಕೊಟ್ಟಿದ್ದಾರೆ ಆದ್ದರಿಂದ ಅದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಪ್ಪ ಹಾಗಿದ್ದರೆ ಅದನ್ನು ಪರಿಶೀಲನೆ ಮಾಡೋಣ ?.

ಶ್ರೀ ಪಿ. ಎನ್. ರೆಡ್ಡಿ—ಇದನ್ನು ಸಿ.ಐ.ಡಿ.ಗೆ ರೆಫರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಪ್ಪ—ಅದರ ಅಗತ್ಯತೆ ಕಂಡುಬಂದರೆ ಅದೆಲ್ಲ ಕ್ರಮಗಳನ್ನು ಅವಶ್ಯಕವಾಗಿ ತೆಗೆದು ಕೊಳ್ಳುತ್ತೇನೆ.

Nationai Rural Water Supply Scheme to Amrutur Village in Kunigal Taluk.

668. SRI D. T. MAYANNA(Huliyurdurga) — Will the Minister for Rural Development and Panchayati Raj be pleased to state:—

(*a*) whether it has come to the notice of the Government that hardship is caused to the people of Amruthur village, Kunigal taluk of Tumkur district due to the paucity of drinking water:

(*b*) since when the Amruthur Village Panchayat has paid their contribution for getting water under National Rural Water Supply Scheme;

(*c*) whether the Government would take immediate action to provide water to this village under the said scheme ?

SRI K. PRABHAKAR (Minister for Rural Development and Panchayati Raj).—

(*a*) Yes.

(*b*) About one year.

(*c*) Yes.

ಶ್ರೀ ಡಿ. ಟಿ. ಮಾಯಣ್ಣ ಸ್ವಾಮಿ, ತುಮಕೂರು ಜಿಲ್ಲಾ ಕುಣಿಗಲ್ ತಾಲ್ಲೂಕ್ ಅಮೃತೂರು ಗ್ರಾಮದಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ಎಂದು ಕೇಳಿದ್ದಕ್ಕೆ ಬಂದಿರುತ್ತದೆ ಎಂದು ಹೇಳಿರುತ್ತೀರಿ, ಆದರೆ ಈ ಅಮೃತೂರು ಅಚ್ಚುಕಟ್ಟಿನಲ್ಲಿ ವರ್ಷ ವರ್ಷ ಬಹಳ ತಡವಾಗಿ ಮಳೆಯಾಗುತ್ತಿರುವ ಕಾರಣ ಅಲ್ಲಿ ನೀರಿನ ವ್ಯವಸ್ಥೆಗೆ ತೊಂದರೆಯಾಗಿರುತ್ತದೆ. ಆದ್ದರಿಂದ ತಾವು ಅದಕ್ಕೆ ಏನಾದರೂ ಕಾರ್ಯಕ್ರಮವನ್ನು ಹಾಕಿ ಕೊಂಡಿರುತ್ತೀರಾ ಎಂದು ಕೇಳುತ್ತೇನೆ.

† ಶ್ರೀ ಕೆ. ಪ್ರಭಾಕರ್—ಕಾರ್ಯಕ್ರಮವನ್ನು ಹಾಕಿಕೊಂಡಿರುತ್ತೇವೆ.

ಶ್ರೀ ಡಿ.ಟಿ ಮಾಯಣ್ಣ—ಏನು ಕಾರ್ಯಕ್ರಮವೆಂದು ಕೇಳುತ್ತೇನೆ ?.

ಶ್ರೀ ಕೆ; ಪ್ರಭಾಕರ್—ಅಲ್ಲಿರತಕ್ಕಂಥ ಪಂಚಾಯತಿ ಈ ವಿಷಯದ ಬಗ್ಗೆ ವರ್ಷ ವರ್ಷ ಹೇಳುತ್ತಲೇ ಬರುತ್ತಿದೆ. ಅಮೃತೂರು ಬಡಾವಣೆ, ನೀರಿನ ವ್ಯವಸೆ , ರಸ್ತೆ ರಿಪೇರಿ ಇವೇ ಮುಂತಾದ ಕೆಲಸ ಕಾರ್ಯಗಳಿಗೆ ಇಂತಿಷ್ಟು ಹಣದ ಅವಶ್ಯಕತೆ ಇರುತ್ತದೆಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದೆ. ಇದು ನಮ್ಮ ವರ್ಕ್ ಲಿಸ್ಟಿನಲ್ಲಿ ಸೇರಿರುತ್ತದೆ. ಈ ವರ್ಷ ಅಲ್ಲಿಗೆ ಬೇಕಾದ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ—ಸ್ವಾಮಿ ಒಂದು ವರ್ಷದಿಂದ ಹಣವನ್ನು ಕೊಟ್ಟಿಲ್ಲ. ಹಣವನ್ನು ಬೇಡಿ ಅಧಿಕಾರಿಗಳು ಮನವಿಯನ್ನು ಕಳುಹಿಸಿಕೊಟ್ಟಿದ್ದಾರೆ ಇದರ ಬಗ್ಗೆ ತಾವು ಏನು ಕ್ರಮ ತೆಗೆದು ಕೊಂಡಿರುತ್ತೀರಿ ?,